ದಿನಾಂಕಃ 21-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ಇಂಗ್ಲೀಷ ಬರುವುದಿಲ್ಲ ಎಂದರೆ ಸರಿ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಇಂಗ್ಲೀಷದಲ್ಲಿದೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ 6 ಎಕರೆ ಜಮೀನು ಇದೆ. ನನ್ನ ಜಮೀನುಗಳು ಪಂಚನಾಯಕನಹಟ್ಟಿ ಗ್ರಾಮದಲ್ಲಿವೆ ಸದರಿ ಜಮೀನುಗಳ ಸರ್ವೆ ನಂ.175,176,212,224 ಅಂತಾ ಇವೆ. ಸರ್ವೆ 175 ಮತ್ತು 176 ಕೂಡಿ ಇವೆ. ತಂಟೆ ಇದ್ದ ಜಮೀನು 175 ಮತ್ತು 176. ನನ್ನ ಹಾಗು ಪ್ರತಿವಾದಿಯರ ನಡುವೆ ಮೊದಲೇ ವಾಟ್ನಿ ಆಗಿದೆ ಎಂದರೆ ಸರಿ. ಸುಮಾರು 15 ವರ್ಷಗಳ ಹಿಂದೆ ಪಾಲು ಆಗಿದೆ. ನಮ್ಮ ನಡುವೆ ಪಾಲು ಆದ ಬಗ್ಗೆ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಯ ಚೆಕಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಯಲ್ಲಪ್ಪ ಬಾನಶೆ ಅವರ ಜಮೀನು , ಪಶ್ಚಿಮ ಬೀರಪ್ಪ ಸಿದ್ದಪ್ಪ ಸುಳಧೊಳಿ ಇವರ ಜಮೀನು , ಉತ್ತರಕ್ಕೆ ವಿಠ್ಠಲ ಬೀರಪ್ಪ ರಾಜಾಪುರೆ ಅವರ ಜಮೀನು , ದಕ್ಷಿಣಕ್ಕೆ ಜಂಗಲ ಇದೆ. ಪ್ರತಿವಾದಿ ನಂ.2 ಎ,2 ಬಿ ಹಾಗು 3 ಇವರ ಜಮೀನುಗಳ ಚೆಕಬಂದಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ನನ್ನ ಜಮೀನು ಇದೆ ಎಂದರೆ ಸರಿ , ಪಶ್ಚಿಮಕ್ಕೆ ಪ್ರತಿವಾದಿ ನಂ.2 ಎ,2 ಬಿ ಹಾಗು 3 ಇವರ ಜಮೀನುಗಳು ಇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ಸ್ವಂತ ತೆರೆದ ಬಾವಿಯ ಸಲುವಾಗಿ ಮಾಡಿರುತ್ತೇನೆ. ನನ್ನ ಜಮೀನಿನ ಉತಾರದಲ್ಲಿ ಬಾವಿ ಇದ್ದ ಬಗ್ಗೆ ಇರುವುದಿಲ್ಲ ಎಂದರೆ ಸರಿಯಲ್ಲ.ತೆರೆದ ಬಾವಿ ಮತ್ತು ಕೊಳವೆಬಾವಿ ಜಮೀನದಲ್ಲಿ ಇದ್ದ ಬಗ್ಗೆ ರೇವಿನ್ಯೂ ಇಲಾಖೆಯವರು ಉತಾರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಕೊಳವೆ ಬಾವಿಯನ್ನು ನಾನು ಸ್ವಂತಕ್ಕೆ ತೆಗೆಸಿಲ್ಲ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಹಾಗು ಪ್ರತಿವಾದಿಯರ ಹಿರಿಯರು ಸೇರಿ ಬಾವಿ ತೆಗೆಸಿದ್ದಾರೆ ಎಂದರೆ ಸರಿಯಲ್ಲ. ಬಾವಿಯ ಪ್ರತಿವಾದಿಯರ ಜಮೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬಾವಿಯನ್ನು ನಾನು ಮತ್ತು ಪ್ರತಿವಾದಿಯರು 1/3 ಪಾಲು ಮಾಡಿಕೊಂಡು ಸರದಿ ಪ್ರಕಾರ ನೀರು ಹಾಯಿಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಕೊಳವೆ ಬಾವಿ ತೆಗೆಸಿರುತ್ತಾನೆ ಎಂದರೆ ಸರಿ. ಸದರಿ ಬಾವಿಯಲ್ಲಿ ನನ್ನ ಹಾಗು ಪ್ರತಿವಾದಿ ನಂ.2 ಎ,2 ಬಿ ಹಾಗು 3 ಇವರ ಹಕ್ಕು ಇರುವುದಿಲ್ಲ ಎಂದರೆ ಸರಿ. ನಾನು ಕೆಇಬಿ ದಾಖಲೆಗಳಲ್ಲಿ ನನ್ನ ಹೆಸರನ್ನು ಸೇರಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ತೆರೆದ ಬಾವಿಯಿಂದ ಸರದಿ ಪ್ರಕಾರ ನಾನು ಮತ್ತು ಪ್ರತಿವಾದಿಯರು ನೀರು ತೆಗೆದುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಬಾವಿಗೆ ನನ್ನೊಬ್ಬನೆ ಮಾಲೀಕನಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಎ,2 ಬಿ ಹಾಗು 3 ಇವರೂ ಸಹ ಮಾಲೀಕರಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಾವಿಯು ಯಾರ ಜಮೀನಿನಲ್ಲಿದೆ ಎಂದು ತಿಳಿದುಕೊಳ್ಳಲು ಕೋರ್ಟ ಕಮೀಷನರ್

ನೇಮಕ ಮಾಡಲು ಅಭ್ಯಂತರ ಇರುವುದಿಲ್ಲ. ನನ್ನ ಜಮೀನದಲ್ಲಿ ಬಾವಿ ಇದೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ.

ಬಾವಿಯಿಂದ ನೀರು ತೆಗೆದುಕೊಳ್ಳಲು ಪ್ರತಿವಾದಿಯರು ಪ್ರಯತ್ನಿಸುತ್ತಿದ್ದರು ಅದಕ್ಕೆ ನಾನು ಅದು ನನ್ನ ಸ್ವಂತ ಬಾವಿ ಇದೆ ಅವರಿಗೆ ನೀರು ತೆಗೆದುಕೊಳ್ಳಲು ಬರುವುದಿಲ್ಲ ಎಂದು ಹೇಳಿರುತ್ತೇನೆ. ಹಿರಿಯರನ್ನು ಕೂಡಿಸಿ ಸದರಿ ಬಾವಿನ ನೀರನ್ನು ನಾನು ಮತ್ತು ಪ್ರತಿವಾದಿಯರು ಉಪಯೋಗಿಸಿಕೊಳ್ಳಬೇಕೆಂದು ಹಿರಿಯರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಬಾವಿಯು ನನಗೆ ಮಾತ್ರ ಸೇರಿದ್ದು ಅದರ ನೀರು ಉಪಯೋಗಿಸಲು ಪ್ರತಿವಾದಿಯರಿಗೆ ತಕರಾರು ಮಾಡಲು ಬರುವುದಿಲ್ಲ. ಪ್ರತಿವಾದಿಯರಿಗೆ ಹೆದರಿಸಬೇಕೆಂದು ಮತ್ತು ಬಾವಿ ನೀರನ್ನು ನಾನೊಬ್ಬನೇ ಉಪಯೋಗಿಸಿಕೊಳ್ಳಬೇಕೆಂದು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ಹಿಸ್ಸೆಗೆ ಬರುವ ಜಮೀನಿನ ಚೆಕಬಂದಿ ಕೊಡದೇ ಪೂರ್ಣ ಜಮೀನಿನ ಚೆಕಬಂದಿ ಕೊಟ್ಟಿರುತ್ತೇನೆ ಎಂದರೆ ಸರಿ. ಬಾವಿ ಇರುವ ನಿಜ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೊಸ ಜಮೀನನ್ನು ಖರೀದಿಸಿದ್ದು ಅದಕ್ಕೆ ನೀರು ಹಾಯಿಸುವ ಸಲುವಾಗಿ ಬಾವಿಯನ್ನು ನಾನೊಬ್ಬನೆ ಉಪಯೋಗಿಸಬೇಕೆಂದು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ ಯಾವ ಕಾರಣ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಲುಕ್ಷಾಣು ಮಾಡಬೇಕೆಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.